ಖಾಸಗಿ ದೂರು ಸಂಖ್ಯೆ: 114/2022.
ಫ್ರಾಸಾ-1.

ದಿನಾಂಕಃ 15.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ದಂಡ ಪ್ರಕ್ರಿಯೆ ಸಂಹಿತೆ ಕಲಂ 200 ರಡಿಯಲ್ಲಿ ಪಿರ್ಯಾದಿಯ ಪ್ರಮಾಣೀಕೃತ ಹೇಳಿಕೆಃ</u>**

ನನ್ನ ಪ್ರಮಾಣಿಕೃತ ಹೇಳಿಕೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅವುಗಳು ನನ್ನ ಮಾಹಿತಿಗೆ ಅನುಗುಣವಾಗಿ ಇರುತ್ತವೆ. ಅದರಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ನಮ್ಮ ಸೊಸೈಟಿಯು ನನಗೆ ನೀಡಿರುವ ಅಧಿಕಾರ ಪತ್ರ, ಆರೋಪಿತನು ನಮ್ಮ ಸೊಸೈಟಿಗೆ ನೀಡಿರುವ ಚೆಕ್, ಎಸಬಿಐ, ರಾಮದುರ್ಗ ಶಾಖೆ ರವರು ನೀಡಿರುವ ಹಿಂಬರಹ, ನನ್ನ ವಕೀಲರ ಮೂಲಕ ಆರೋಪಿತನಿಗೆ ನೀಡಿರುವ ನೋಟಿಸಿನ ಕಚೇರಿ ಪ್ರತಿ, ಅಂಚೆ ರಶೀದಿ ಮತ್ತು ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ. 1 ರಿಂದ 6 ಎಂದು ಗುರುತಿಸಲಾಯಿತು.

ನಿಶಾನೆ ಪಿ-2 ರ ಚೆಕನಲ್ಲಿ ಇರುವ ಆರೋಪಿತನ ಸಹಿಯನ್ನು ನಾನು ಈಗ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ.2 (ಎ) ಎಂದು ಗುರುತಿಸಲಾಯಿತು.

**<u>ಈ ಮೂಲಕ ನನ್ನ ಪ್ರಮಾಣಿಕೃತ ಹೇಳಿಕೆಯನ್ನು ಅಂತ್ಯಗೊಳಿಸಿದ್ದು, ನನ್ನ ಪಿರ್ಯಾದಿನಲ್ಲಿ ಕೋರಿರುವಂತೆ ಪರಿಹಾರ ನೀಡಲು ಫ್ರಾರ್ಥಿಸುತ್ತೇನೆ.</u>**

(ತೆ ನ್ಯಾ ದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ರಾಮದುರ್ಗ